
ಮಡಿವಾಳಪ್ಪ ತೊಟಗಿ


ಗಿಡಗೆಂಪು ಜೋಳ

ಬಿತ್ತತೀಯಾ' ಎಂದು ತಣ್ಣೀರೆರಚಲು ಮುಂದಾದರೂ ಮಡಿವಾಳಪ್ಪ 'ಆದದ್ದಾಗಲಿ, ಕನಿಷ್ಠ ಆಕಳಿಗೆ ಮೇವಾದರೂ ಸಿಕ್ಕೀತಲ್ಲ' ಎಂದು ಎರಡು ಎಕರೆಯಲ್ಲಿ 20 ತಳಿ ಬಿತ್ತಿದರು. ಬಿತ್ತಿದ ಒಂದು ತಿಂಗಳ ಬಳಿಕ ಒಂದೇ ಸಲ ದೊಡ್ಡ ಮಳೆ ಸುರಿಯಿತು. ದೇಸಿ ತಳಿಗಳ ತಾಕತ್ತು ಗೊತ್ತಾಗಿದ್ದೇ ಆವಾಗ!

ಮೂರು ತಿಂಗಳಲ್ಲಿ ಎಲ್ಲ ಜೋಳದ ತಳಿಗಳೂ ತೆನೆ ಹೊತ್ತು ನಿಂತವು. ನೋಡಲು ಒಂದಕ್ಕಿಂತ ಒಂದು ಚೆಂದ. ಅವುಗಳ ಹೆಸರೂ ವಿಶಿಷ್ಟ. ಸಕ್ಕರೆ ಜೋಳ, ದೋಸೆ ಜೋಳ, ಅರಳು ಜೋಳ, ಕಡುಬು ಜೋಳಗಳ ಉಪಯೋಗವನ್ನು ಅವುಗಳ ಹೆಸರೇ ಸೂಚಿಸುತ್ತವೆ. ಹಂದಿ ಮೂತಿ, ಕಾಗಿ ಮೂತಿ, ಬಿಳಿ ಮುತ್ತಿನ ಜೋಳದ ತೆನೆಗಳು ತಮ್ಮ ಸ್ವರೂಪವನ್ನು ತೆರೆದಿಡುತ್ತವೆ. ಗೋಡೆಗೆ ಎಸೆದರೂ ಕಾಳು ಸುಲಭವಾಗಿ ಬಿಚ್ಚದ ಗಟ್ಟಿ ತೆನೆ, ಕೋಡು ಮುರಿದಂತೆ ಕಾಣುವ ಕೋಡುಮುರುಕ, ಕೆಂಪು ಕಾಳುಗಳ ಕೆಂಪು ತೆನೆ ತಳಿ ಇವರಲ್ಲಿವೆ. ಕಾಳಿನ ಮೇಲೆ ಸಿಪ್ಪೆಯು ಕಣ್ಣುರೆಪ್ಪೆಯಂತೆ ಮುಚ್ಚಿಕೊಂಡಿರುವ ಅತಿ ವಿಶಿಷ್ಟ ಕಣ್ಣುಮುಚ್ಚುಗ ತಳಿಯ ಮೂರು ಬಣ್ಣದ (ಕೆಂಪು, ಕಪ್ಪು ಹಾಗೂ ಬಿಳಿ) ಜೋಳಗಳು ಆಕರ್ಷಿಸುತ್ತವೆ. ಎತ್ತರದ ಪೈರು, ಬಲಿಷ್ಠ ಹಾಗೂ ಸುಂದರ ತೆನೆಯ ಮಾಲದಂಡಿ, ಒತ್ತೊತ್ತಾದ ಕಾಳುಗಳ ನಂದ್ಯಾಲ ತಳಿಗಳು ಹಿಂಗಾರು ಜೋಳದ ಇನ್ನಷ್ಟು ಬಗೆಗಳು.

ಒಂದೊಂದು ತಳಿಯನ್ನೂ ಜತನದಿಂದ ಕೊಯ್ಲು ಮಾಡಿ, ಪ್ರತ್ಯೇಕಿಸಿ ಗುಣಮಟ್ಟದ ಬೀಜಗಳನ್ನು ಮಡಿವಾಳಪ್ಪ ಸಂಗ್ರಹಿಸಿ ಇಡಲು ನಿರ್ಧರಿಸಿದ್ದಾರೆ. 'ಕಡಿಮೆ ಮಳೆಗೆ ಹೊಸ ತಳಿಗಳು ಹೊಂದಿಕೊಳ್ಳುವುದು ತೀರಾ ಕಡಿಮೆ. ಹವಾಮಾನ ಬದಲಾವಣೆಯ ಈ ಸಂಕಟದ ಸಮಯದಲ್ಲಿ ಹಿಂಗಾರು ಜೋಳದ ಈ ವೈವಿಧ್ಯಮಯ ತಳಿಗಳು ಹೊಸ ದಾರಿ ತೋರುತ್ತವೆ' ಎನ್ನುತ್ತಾರೆ, ಮಡಿವಾಳಪ್ಪ ಅವರನ್ನು ದೇಸಿ ಜೋಳದ ಬೆಳೆಯಲು ಪ್ರೇರೇಪಿಸಿದ ಕೃಷಿ ಕಾರ್ಯಕರ್ತ ಶಿವರಾಜ್ ಹುನಗುಂದ.

'ಮಳೆ ಇಲ್ಲ; ಇನ್ನೇನು ಬೆಳೆಯೋದ್ರೀ ಎಂದು ಕೇಳುತ್ತಿದ್ದ ರೈತರಿಗೆ ದೇಸಿ ತಳಿ ಜೋಳ ಪರ್ಯಾಯ ಸಾಧ್ಯತೆ ತೋರಿಸಿದೆ. ಸೊಬಗಿನ ತೆನೆ ಹೊತ್ತು ನಿಂತ ಜೋಳಗಳತ್ತ ಒಂದಷ್ಟು ರೈತರು ಆಗಲೇ ದೃಷ್ಟಿ ಹರಿಸಿದ್ದಾರೆ. 'ಗೊಬ್ರ ಹಾಕ್ಲಿಲ್ಲ. ಹುಳಾ–ರೋಗಾನೂ ಬರ್ಲಿಲ್ಲ. ಇಷ್ಟ್ ಛಲೋ ಬೆಳೀತಾವ ಅಂತ ನಾನ ಅಂದ್ಕೊಂಡೇ ಇರಲಿಲ್ಲ. ಮದ್ಲಿಗೆ ನನ್ನ ನೋಡಿ ನಕ್ಕವ್ರು ಈಗ ಎಲ್ಲಾ ತಳಿ ಬೀಜ ಕೇಳಲಿಕ್ಕೆ ಶುರು ಮಾಡ್ಯಾರ ನೋಡ್ರೀ ಎಂದು ಮಡಿವಾಳಪ್ಪ ನಗುತ್ತ ಹೇಳುತ್ತಾರೆ.

### ದೇಸಿ ತಳಿ ಜೋಳದ ವೈವಿಧ್ಯ

ಸಕ್ಕರೆ, ದೋಸೆ, ಬಿಳಿ ಅರಳಿನ ಜೋಳ, ಅರಳಿನ ಜೋಳ, ಗಂಗಾವತಿ, ನಂದ್ಯಾಲ, ಕೋಡಮುರುಕ (ಕೆಂಪು), ಮಾಲದಂಡಿ, ಬಿಳಿ ಮುತ್ತಿನ ಜೋಳ, ಹಂದಿ ಮೋತಿ, ಎಣ್ಣೆಗಾರ, ಕಡುಬಿನ ಕೆಂಪು ಜೋಳ, ಕಾಗಿ ಮೋತಿ, ಬಿದರಕುಂದಿ ಚಂಡಕಿ, ಗಿಡಗೆಂಪು, ಕೆಂಪು ತೆನೆ (ಅರಳು), ಗಟ್ಟಿ ತೆನೆ, ಬಿಳಿ ಕಣ್ಣಮುಚ್ಚುಗ, ಕೆಂಪು ಕಣ್ಣಮುಚ್ಚುಗ ಹಾಗೂ ಕಪ್ಪು ಕಣ್ಣಮುಚ್ಚುಗ.